# ಮುರಳಿಗಾನ, ಆಕಾಶ್‌ಯಾನ



**ಅತಿಚಿಕ್ಕ ವಯಸ್ಸಿನಲ್ಲಿ ಉನ್ನತ ಸಾಧನೆ ಮಾಡಿ ದೇಶದ ಒಬ್ಬ ಯುವ ಪ್ರತಿಭಾವಂತ ಬಾನ್ಸುರಿ ವಾದಕನೆಂಬ ಹೆಗ್ಗಳಿಕೆ ಗಳಿಸಿದ 'ಚೈಲ್ಡ್ ಪ್ರಾಡಿಜಿ' ಆಕಾಶ್ ಎಸ್. ಈತನ ವಾದನ ಚಮತ್ಕಾರ ಭಾರತಾದ್ಯಂತ ಅಲ್ಲದೆ ವಿದೇಶಗಳಲ್ಲೂ ಕೇಳುಗರನ್ನು ಮೋಡಿ ಮಾಡಿದೆ.**

**■ ಉಮಾ ಅನಂತ್**

ಅದು ವಾರಣಾಸಿಯಲ್ಲಿ ನಡೆದ ಸಂಕಟ್ ಮೋಚನ್ ರಾಷ್ಟ್ರೀಯ ಸಂಗೀತ ಸಮಾರೋಹ. ಸಾಮಾನ್ಯವಾಗಿ ಹಿರಿಯ ವಿದ್ವಾಂಸರಿಗಷ್ಟೆ ಆ ಪ್ರತಿಷ್ಠಿತ ವೇದಿಕೆಯಲ್ಲಿ ಹಾಡುವ ಅಥವಾ ನುಡಿಸುವ ಅವಕಾಶ ಸಿಗುವುದು. ಇಂಥ ವೇದಿಕೆಯಲ್ಲಿ ಹದಿಹರೆಯದ ಹುಡುಗನೊಬ್ಬ ಬಾನ್ಸುರಿ ನುಡಿಸುವ ಅವಕಾಶ ಗಿಟ್ಟಿಸಿಕೊಂಡ. ಸುಮಾರು ಒಂದೂವರೆ ಗಂಟೆ ಕಾಲ ವಿದ್ವಜ್ಜನರ ಮುಂದೆ ಹಿಂದೂಸ್ತಾನಿ ರಾಗ–ತಾನಗಳನ್ನು ನುಡಿಸಿ ಎಲ್ಲರ ಮೆಚ್ಚುಗೆಗೆ ಪಾತ್ರನಾದ.

ಇದೇ ಬಾಲಕ ಕರ್ನಾಟಕದ ರಾಜ್ಯಪಾಲರಿಂದ ಏಳನೇ ವಯಸ್ಸಿಗೇ ಚೈಲ್ಡ್ ಪ್ರಾಡಿಜಿ ಪ್ರಶಸ್ತಿ, ಪೋಗೊ ಅಮೇಜಿಂಗ್ ಪ್ರಶಸ್ತಿ, ಹತ್ತನೇ ವಯಸ್ಸಿಗೆ ಕಿಡ್ಸ್ ಅವಾರ್ಡ್, ಅಸಾಧಾರಣ ಸಾಧನೆಗಾಗಿ ಸಿನಿಮಾ ನಿರ್ದೇಶಕ ಮಧುರ್ ಭಂಡಾರ್ಕರ್ ಅವರಿಂದ ಐದು ಲಕ್ಷ ರೂಪಾಯಿಗಳ ನಗದು ಬಹುಮಾನ, 10ನೇ ವಯಸ್ಸಿನಲ್ಲಿ ಕರ್ನಾಟಕ